ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 37/2017 ಸಿಡಬ್ಲೂ: 14 ಪಿ ಡಬ್ಲೂ: 11**

| | |
|---|---|
| ಹೆಸರು | ಬಿ.ಎಸ್. ಸರ್ಪಭೂಷಣ |
| ತಂದೆಯ ಹೆಸರು | ಲೇಟ್ ಶಿವಣ್ಣ |
| ವಯಸ್ಸು | 67 ವರ್ಷ |
| ವೃತ್ತಿ | ನಿವೃತ್ತ ಎ ಎಸ್ ಐ |
| ವಾಸ | ಮಂಡ್ಯ |

ದಿನಾಂಕಃ 06.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ನಾನು 2017ನೇ ಸಾಲಿನಲ್ಲಿ ಎ ಎಸ್ ಐ ಆಗಿ ಶ್ರೀರಂಗಪಟ್ಟಣದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ.
2. ದಿನಾಂಕಃ 29.03.2017 ರಂದು ನಾನು ಠಾಣಾಧಿಕಾರಿಯಾಗಿದ್ದಾಗ ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯಿಂದ ಬ್ರಹ್ಮಪುರ ಗ್ರಾಮದ ನಾಗೇಂದ್ರ ಎಂಬುವವರು ಹಲ್ಲೆಗೆ ಒಳಗಾಗಿ ಚಿಕಿತ್ಸೆಗೆ ದಾಖಲಾಗಿರುತ್ತಾರೆ ಎಂದು ಬಂದ ಮಾಹಿತಿಯ ಮೇರೆಗೆ ನಾನು ಸಂಜೆ 7 ಗಂಟೆಗೆ ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರಗೆ ತೆರಳಿ 7 ರಿಂದ 7.30 ಗಂಟೆಯವರೆಗೂ ಗಾಯಾಳು ನಾಗೇಂದ್ರ ಅವರ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಠಾಣೆಗೆ 7.45ಕ್ಕೆ ಬಂದು ಠಾಣೆ ಬಂದು ಸದರಿ ಹೇಳಿಕೆಯ ಮೇರೆಗೆ ಕೇಸನ್ನು ದಾಖಲು ಮಾಡಿರುತ್ತೇನೆ. ನಂತರ ದಿಃ 30.03.2017 ರಂದು ಈ ಕೇಸಿನ ಕೃತ್ಯ ನಡೆದ ಸ್ಥಳವಾದ ಬ್ರಹ್ಮಪುರ ಗ್ರಾಮಕ್ಕೆ ತೆರಳಿ ಈ ಕೇಸಿನ ಸಾಕ್ಷಿದಾರರಾದ ಚಾಸಾ 3

ರವರು ಸ್ಥಳದಲ್ಲಿ ಹಾಜರಿದ್ದು, ಅವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು, ಪಂಚರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಮಾಡಿರುತ್ತೇನೆ. ಪಂಚನಾಮೆ ಕಾಲದಲ್ಲಿ ಚಾಸಾ 3 ರವರು ಕೃತ್ಯಕ್ಕೆ ಸಂಬಂಧಪಟ್ಟ ಹರಿದ ಶರ್ಟ್ ಒಂದು ದೊಣ್ಣೆ ಮತ್ತು ರಿಪೀಸ್ ಪಟ್ಟಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ಮುದ್ದೆ ಮಾಲನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಹಾಗೂ ಪಂಚನಾಮೆಯನ್ನು ಬೆಳಗಿನ 10 ರಿಂದ 11 ಗಂಟೆಯವರೆಗೂ ಜರುಗಿಸಿರುತ್ತೇನೆ. ನಂತರ ಅದೇ ದಿನ ಈ ಕೇಸಿನ ಸಾಕ್ಷಿದಾರಾರದ ಚಾಸಾ 3, 7, 8 ಮತ್ತು 9 ರವರು ಠಾಣೆಗೆ ಹಾಜರಾದ ಮೇಲೆ ಅವರನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದಿರುತ್ತೇನೆ. ದಿಃ 31.01.2017 ರಂದು ಈ ಕೇನಸಿನ ಗಾಯಳುಗಳಾದ ಚಾಸಾ 4 ರಿಂದ 6 ಹಾಗೂ 2 ರವರು ಮೈಸೂರು ಪ್ರಜ್ವಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಠಾಣೆಗೆ ಹಾಜರಾದ ಮೇರೆಗೆ ಅವರುಗಳನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ. ದಿಃ 25.04.2017 ರಂದು ಈ ಕೇಸಿನ ಆರೋಪಿಗಳು ಶ್ರೀರಂಗಪಟ್ಟಣ ಅಪರ ಸತ್ರ ನ್ಯಾಯಾಲಯದಿಂದ ಷರತ್ತು ಬದ್ದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿರುವುದರಿಂದ ನ್ಯಾಯಾಲಯದ ಆದೇಶದ ಮೇರೆಗೆ ಸದರಿಯವರನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 18.05.2017 ರಂದು ಈ ಕೇಸಿನ ಗಾಯದ ಪ್ರಮಾಣ ಪತ್ರಗಳನ್ನು ಪಡೆದಿರುತ್ತೇನೆ. ನಂತರ ತನಿಖೆ ಪೂರ್ಣಗೊಂಡಿದ್ದರಿಂದ ತನಿಖೆ ಪೂರೈಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ 1 ಮತ್ತು 2 ಅವರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಎಫ್ ಐ ಆರ್ ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ8 ಎಂದು, ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಹೇಳಿಕೆಯನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ9

ಎಂದು, ಸಾಕ್ಷಿಯ ಸಹಿಯನ್ನು ನಿಪಿ 9(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಸ್ವತ್ತಿನ ಪಟ್ಟಿಯನ್ನು ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ10 ಎಂದು ಸಾಕ್ಷಿಯ ಸಹಿಯನ್ನು ನಿಪಿ 10(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ1 ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1(ಸಿ) ಎಂದು ಗುರುತಿಸಲಾಗಿದೆ. ನಿಪಿ7 ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 7(ಸಿ) ಎಂದು ಗುರುತಿಸಲಾಗಿದೆ. ನಿಪಿ8 ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 8(ಬಿ) ಎಂದು ಗುರುತಿಸಲಾಗಿದೆ. ಸಾಕ್ಷಿ ಮತ್ತೊಂದು ಗಾಯದ ಪ್ರಮಾಣ ಪತ್ರವನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ11 ಎಂದು ಸಾಕ್ಷಿಯ ಸಹಿಯನ್ನು ನಿಪಿ 11(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಇನ್ನೊಂದು ಗಾಯದ ಪ್ರಮಾಣ ಪತ್ರವನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ12 ಎಂದು ಸಾಕ್ಷಿಯ ಸಹಿಯನ್ನು ನಿಪಿ 12(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ2 ರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ಸಾಕ್ಷಿ ಮತ್ತೊಂದು ಗಾಯದ ಪ್ರಮಾಣ ಪತ್ರವನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ13 ಎಂದು ಸಾಕ್ಷಿಯ ಸಹಿಯನ್ನು ನಿಪಿ 13(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಮತ್ತೊಂದು ಗಾಯದ ಪ್ರಮಾಣ ಪತ್ರವನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ14 ಎಂದು ಸಾಕ್ಷಿಯ ಸಹಿಯನ್ನು ನಿಪಿ 14(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ನ್ಯಾಯಾಲಯದ ಪತ್ರವನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ15 ಎಂದು ಸಾಕ್ಷಿಯ ಸಹಿಯನ್ನು ನಿಪಿ 15(ಎ) ಎಂದು ಗುರುತಿಸಲಾಗಿದೆ. ನಾನು ಚಾಸಾ 4 ಮತ್ತು 6 ರವರ 164 ಹೇಳಿಕೆಯನ್ನು

ಪಡೆಯಲು ಕೋರಿಕೆ ಸಲ್ಲಿಸಿದ್ದು, ಆ ಪ್ರಕಾರ ಅವರ ಹೇಳಿಕೆಯನ್ನು ಮಾನ್ಯ ನ್ಯಾಯಾಲಯವು ಪಡೆದಿರುತ್ತದೆ.

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಸಿ ಪಿ ಎಂ ವಕೀಲರಿಂದಃ

3. ಚಾಸಾ 1 ರವರು ಆಸ್ಪತ್ರೆಗೆ ದಾಖಲಾಗಿದ್ದಾರ ಎಂಬ ಬಗ್ಗೆ ಯಾವುದೇ ದಾಖಲಾತಿಯನ್ನು ನೋಡಿರುವುದಿಲ್ಲ. ಚಾಸಾ 1 ರವರು ದಿಃ 29.03.2017 ರಂದು ಚಿಕಿತ್ಸೆ ಪಡೆದಿದ್ದಾರ ಎಂದು ಖಾತ್ರಿ ಮಾಡಿಕೊಳ್ಳಲು ನಾನು ಆಸ್ಪತ್ರೆಯಿಂದ ಯಾವುದೇ ದಾಖಲಾತಿಯನ್ನು ಪಡೆದಿರುವುದಿಲ್ಲ. ಚಾಸಾ 1 ಅಪಘಾತದ ದಿನ ಒಳರೋಗಿಯಾಗಿ ದಾಖಲಾಗಿದ್ದರು. ಚಾಸಾ 1 ರವರು ಒಳರೋಗಿಯಾಗಿ ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಆ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಚಸಾ 1 ರವರು ಹಲ್ಲೆ ಹಿನ್ನೆಲೆಯಲ್ಲಿ ಯಾವುದೇ ಚಿಕಿತ್ಸೆ ಪಡೆಯದೇ ಇದ್ದರೂ ಸಹ ಹಾಗೂ ಯಾವುದೇ ಹೇಳಿಕೆಯನ್ನು ನಾನು ಪಡೆಯದೇ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪಂಚನಾಮೆಯನ್ನು ಮಾಡದೇ ಇದ್ದರೂ ಸಹ ಠಾಣೆಯಲ್ಲೇ ಕುಳಿತುಕೊಂಡು ತಯಾರಿಸಿದ ದಾಖಲಾತಿಗೆ ಸಹಿಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಹೇಳಿಕೆ ನೀಡದಿದ್ದರೂ ಸಹ ಪಿರ್ಯಾದಿದಾರರಿಗೆ ಸಹಾಯ ಮಾಡುವ ದುರುದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಫೋಟೋಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

4. ಎಂ ಒ ಗಳನ್ನು ಚಾಸಾ 3 ರವರು ತಮ್ಮ ಮನೆಯಿಂದ ತಂದು ನನಗೆ ನೀಡಿರುತ್ತಾರೆ. ಎಂ ಒ 2 ಕಟ್ಟಿಯಾಗಿದ್ದು, ಅದು ದೊಣ್ಣೆಯಲ್ಲ ಎಂದರೆ ಸರಿಯಲ್ಲ. ಎಂ ಒ 2 ಕಟ್ಟಿ ಎಂದು ಕಂಡು

ಬರುತ್ತಿದ್ದರೂ ಸಹ ನಾನು ಅದು ದೊಣ್ಣೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ ಒ 1 ಕಿಟಕಿಗೆ ಉಪಯೋಗಿಸುವ ಪಟ್ಟಿಯಾಗಿದ್ದು, ಅದು ರಿಪೀಸ್ ಪಟ್ಟಿ ಅಲ್ಲ ಎಂದರೆ ಸರಿಯಲ್ಲ. ಪಿರ್ಯಾದಿದಾರರಿಗೆ ಸಹಾಯ ಮಾಡುವ ದುರುದ್ದೇಶದಿಂದ ನಾನು ಗಾಯದ ಪ್ರಮಾಣ ಪತ್ರಗಳನ್ನು ಡಾಕ್ಟರ್ ಅವರೊಂದಿಗೆ ಶಾಮೀಲಾಗಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ತನಿಖೆಯನ್ನು ಸರಿಯಾಗಿ ಮಾಡದೇ ಇದ್ದರೂ ಸಹ ಪಿರ್ಯಾದಿದಾರಿಗೆ ಸಹಾಯ ಮಾಡುವ ದುರುದ್ದೇಶದಿಂದ ಸುಳ್ಳು ಅಂತಿಮ ವರದಿಯನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲೇ ಚಾಸಾ 4 ಮತ್ತು 6 ರವರ ಹೇಳಿಕೆಗಳನ್ನು ಮೊದಲೆ ಪಡೆದಿರುತ್ತೇನೆ. ನಾನು 3 ತಿಂಗಳ ನಂತರ ಅಂದರೆ ದಿಃ 07.06.2017 ರಂದು 164 ಹೇಳಿಕೆಯನ್ನು ಮಾಡಿಸಿರುತ್ತೇನೆ ಎಂದರೆ ಸರಿ. ನಾನು 3 ತಿಂಗಳ ನಂತರ ಪಿರ್ಯಾದಿದಾರರಿಗೆ ಸಹಾಯ ಮಾಡಬೇಕೆಂಬ ದುರುದ್ದೇಶದಿಂದ ಚಾಸಾ 4 ಮತ್ತು 6 ರವರ ಹೇಳಿಕೆಯನ್ನು ಪಡೆಯುವಂತೆ ತಡವಾಗಿ ಕೋರಿರುತ್ತೇನೆ ಎಂದರೆ ಸರಿಯಲ್ಲ. ನಾನು ಚಾಸಾ 4 ಮತ್ತು 6 ರವರಿಗೆ ಯಾವ ರೀತಿ ಹೇಳಿಕೆ ನೀಡಬೇಕು ಎಂದು ಹೇಳಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*